### ಶ್ರೀಭಗವಾನರೊಡನೆ ಚಟ್ನಿ ಅರೆದುದು

ಒಂದು ದಿನ ಬೆಳಗಿನ ಜಾವ ನಾಲ್ಕು ಘಂಟೆಗೇ ಅಡುಗೆಮನೆಗೆ ಬರಬೇಕೆಂದು ನನಗೆ ಕರೆ ಬಂದಿತು. ಅಲ್ಲಿ ನನಗೊಂದು ಆಶ್ಚರ್ಯ ಕಾದಿತ್ತು. ಅಡುಗೆಮನೆಯ ಪಡಸಾಲೆ ಪ್ರವೇಶಿಸುತಿದ್ದಂತೆ ಶ್ರೀಭಗವಾನರು ತಮ್ಮ ಮಾಮೂಲಿ ಉಡುಗೆಯಲ್ಲಿ ಚಟ್ನಿ ಅರೆಯುವ ಒರಳುಕಲ್ಲಿನ ಮುಂದೆ ಕುಳಿತಿದ್ದುದನ್ನು ಕಂಡೆ. ಇನ್ನೂ ಕೆಲವರು ಅವರ ಹತ್ತಿರ ಕುಳಿತಿದ್ದರು. ತುರಿದಿಟ್ಟಿದ್ದ ಕಾಯಿಯನ್ನು ಒರಳಲ್ಲಿ ಹಾಕಿಕೊಂಡು ನಾನು ತಿರುವತೊಡಗಿದೆ. ಒರಳಿಂದ ಮೇಲೆ ಬಂದ ಅರೆಬರೆ ರುಬ್ಬಿದ ಕಾಯಿತುರಿಗಳನ್ನು ಮತ್ತೆ ಒರಳಿಗೆ ತಳ್ಳುತ್ತ ಅವರು ನನಗೆ ಸಹಾಯ ಮಾಡಿದರು. ಜೊತೆಯಲ್ಲೇ ಚಟ್ನಿಗೆ ಹಾಕಬೇಕಿದ್ದ ಉಪ್ಪು, ಮೆಣಸಿನಕಾಯಿ ಮೊದಲಾದ ಪದಾರ್ಥಗಳನ್ನು ಒರಳಿಗೆ ಹಾಕುತ್ತಿದ್ದರು. ತಿರುವಿದ್ದು ಮುಗಿದ ಮೇಲೆ ಅವರು ಅದನ್ನು ಒಂದು ಪಾತ್ರೆಗೆ ತುಂಬಿದರು. ಅಡುಗೆಮನೆಗೆ ಹೋಗಿ ದೊಡ್ಡ ಸೌಟಿನಲ್ಲಿ ಎಣ್ಣೆ ಹಾಕಿ ಸಾಸಿವೆ, ಒಣಮೆಣಸಿನಕಾಯಿಯ ಒಗ್ಗರಣೆ ಹಾಕಿದರು. ಅನಂತರ ಅದನ್ನು ಚಟ್ನಿ ತಯಾರಿಸಿಟ್ಟಿದ್ದ ಪಡಸಾಲೆಗೆ ತಂದರು. ಸಿದ್ಧವಾಗಿದ್ದ ಚಟ್ನಿಯ ಪಾತ್ರೆಗೆ ಅದನ್ನು ಸುರಿದು, ಚೆನ್ನಾಗಿ ಕಲಕಿದರು.

### ಒಂದು ಮಧುರ ಹಾಸ್ಯ

ಚಟ್ನಿ ಸಿದ್ಧವಾದ ಬಳಿಕ ಶ್ರೀಭಗವಾನರು ಅಲ್ಲಿ ಕುಳಿತಿದ್ದ ನಾಲ್ಕೈದು ಜನರಿಗೆ ಅದನ್ನು ರುಚಿ ನೋಡಲು ಕೊಟ್ಟರು. ತಾವೂ ತಲೆ ಮೇಲೆತ್ತಿ, ಬೆರಳ ತುದಿಯಲ್ಲಿ ಸ್ವಲ್ಪ ಚಟ್ನಿಯನ್ನು ತೆಗೆದುಕೊಂಡು, ತಮ್ಮ ತುಟಿಗೆ ತಗುಲಿಸಿಕೊಳ್ಳದೆ ಎತ್ತರದಿಂದ ಬಾಯಿಗೆ ಹಾಕಿಕೊಂಡರು. (ಅಡುಗೆಮನೆಯಲ್ಲಿ ತಯಾರಿಸಿದ ಪದಾರ್ಥಗಳನ್ನು ಎಂಜಲು ಮಾಡದ ಹಾಗೆ ತಿನ್ನುವ ಈ ರೀತಿಯ ಸದಾಚಾರ ಭಾರತದ ಹಿಂದೂ ಕುಟುಂಬಗಳಲ್ಲಿ ಈಗಲೂ ಇದೆ.) ಭಕ್ತರು ಚಟ್ನಿಯ ರುಚಿ ನೋಡುತ್ತಿದ್ದಾಗ ಭಗವಾನರು, 'ಅದು ಹೇಗಿದೆ?' ಎಂದು ಕೇಳಿದರು. ಭಗವಾನರ ಮೇಲಿನ ಗೌರವದಿಂದ ತಮ್ಮ ಸಮ್ಮತಿ ಸೂಚಿಸುವಂತೆ ಎಲ್ಲರೂ ಸುಮ್ಮನಿದ್ದರು. ಆಗ ಭಗವಾನರು ತಮಿಳು ಭಾಷೆಯಲ್ಲಿ, 'ಚಟ್ನಿ ಇಡ್ಲಿಗಳನ್ನು ಕೇಳುತ್ತಿದೆಯೆ?' ಎಂದು ಹಾಸ್ಯ ಮಾಡಿದರು. ಎಲ್ಲರೂ ಆ ಹಾಸ್ಯವನ್ನು ಗ್ರಹಿಸಿ ನಕ್ಕರು. ಆಶ್ರಮದ ನಿವಾಸಿಗಳು ಹೊರಟುಹೋದರು. ಬೆಳಗಿನ ಅತಿಥಿಗಳು ಬಂದಾಗ ಇಡ್ಲಿಯೊಂದಿಗೆ ಬಡಿಸಲು ಚಟ್ನಿಯನ್ನು ಅಡುಗೆಮನೆಗೆ ತೆಗೆದುಕೊಂಡು ಹೋದರು.

### ತರಕಾರಿ ಹೆಚ್ಚುವ ಕೋಣೆಯಲ್ಲಿ ಸೇವೆ

ಭಗವಾನರು ಅಲ್ಲಿಂದ ತರಕಾರಿ ಹೆಚ್ಚುವ ಕೋಣೆಗೆ ಹೋದರು. ಆಶ್ರಮದ ನಿವಾಸಿಗಳಿಗೆ ಮತ್ತು ಆಶ್ರಮಕ್ಕೆ ಬರುವ ಅತಿಥಿಗಳಿಗೆ ಮಧ್ಯಾಹ್ನದ ಊಟದ ಸಿದ್ಧತೆಗಾಗಿ ಅಡುಗೆಮನೆಯ ಪರಿಚಾರಕರೊಬ್ಬರು ತರಕಾರಿ ಹೆಚ್ಚುತ್ತಿದ್ದರು. ಭಗವಾನರು ಅವರಿಗೆ ಸಹಾಯ ಮಾಡತೊಡಗಿದರು. ಅವರು ಕಾಲು ಮಡಚಿ ಪದ್ಮಾಸನದಲ್ಲಿ ಕುಳಿತು, ಸಂಪೂರ್ಣ ಗಮನವಿಟ್ಟು ತರಕಾರಿ ಹಚ್ಚುತ್ತಿದ್ದರು. ಅವರು ಹಚ್ಚಿದ ಎಲ್ಲ ತರಕಾರಿ ತುಂಡುಗಳೂ ಸರಿಸುಮಾರು ಒಂದೇ ಗಾತ್ರದವಾಗಿದ್ದವು. ನಾವು ಮಾಡುವ ಕೆಲಸ ಯಾವುದೇ ಇರಲಿ, ಅದನ್ನು ಸಂಪೂರ್ಣ ಗಮನವಿಟ್ಟು ಎಚ್ಚರಿಕೆಯಿಂದ ಮಾಡಬೇಕು, ಪ್ರತಿಯೊಂದು ಕೆಲಸವೂ ದೇವರ ಪೂಜೆಯೇ ಎಂಬುದನ್ನು ಈ ಘಟನೆಯಿಂದ ನಾನರಿತೆ.

*(ಮುಂದುವರಿಯುವುದು)* ✱

## ಸ್ವಾಮೀಜಿ ಮತ್ತು ಮಾಯೆ

ಗಿರೀಶ ಘೋಷ್‌ಗೆ ಒಮ್ಮೆ ನರೇಂದ್ರ ಹೇಳಿದನು, "ಮಾಯೆ ನನ್ನನ್ನು ಸೋಲಿಸಲು ಹವಣಿಸುತ್ತಿದ್ದಾಳೆ. ನಾನು ಅವಳನ್ನು ಸೋಲಿಸಲು ಹೋರಾಡುತ್ತಿದ್ದೇನೆ. ಈರ್ವರ ಮಧ್ಯೆ ಒಪ್ಪಂದವಾಗಲು ಸಾಧ್ಯವೇ ಇಲ್ಲ. ಒಂದೋ ಮಾಯೆ ಮಡಿಯಬೇಕು, ಅಥವಾ ನಾನು ಮಡಿಯಬೇಕು. ಇಬ್ಬರೂ ಒಟ್ಟಿಗೆ ಇರಲಾಗದು" ಎಂತಹ ದೃಢನಿರ್ಧಾರ, ಎಂತಹ ಘನತರ ಚಿಂತನೆಗಳು ಸ್ವಾಮೀಜಿಯವರದಾಗಿತ್ತು! ಮಾಯೆಯ ಮೇಲಿನ ವಿಜಯ, ಆತ್ಮಪ್ರಭುತ್ವ– ಇದೇ ಸ್ವಾಮೀಜಿಯವರ ಸಿದ್ಧಿ.

ನರೇಂದ್ರ ಮಾಯಾ ಜಗತ್ತನ್ನು ತನ್ನ ಪದದಡಿ ಹೊಸಕಿ ಹಾಕಿ, ಅದನ್ನು ಮೆಟ್ಟಿ ನಿಂತು ಆತ್ಮಮಹಿಮೆಯಲ್ಲಿ ಪ್ರತಿಷ್ಠಿತನಾಗಲು ಹಾತೊರೆಯುತ್ತಿದ್ದನು. ನರೇಂದ್ರನ ಈ ದೃಷ್ಟಿ ಅವನ ಸೋದರ ಸಂನ್ಯಾಸಿಗಳ ಮೇಲೂ ಗಾಢ ಪ್ರಭಾವವನ್ನು ಬೀರಿತ್ತು. ಇದು ಸಾಧನೆಯ ಮೊದಲ ಹಂತದಲ್ಲಿ ನರೇಂದ್ರನ ದೃಷ್ಟಿಕೋನ!

ಒಮ್ಮೆ ನರೇಂದ್ರ ಗಿರೀಶನ ಬಳಿ ಉದ್ಗರಿಸಿದನಂತೆ – "ನಾನು ಪ್ರತಿಯೊಂದನ್ನೂ ಮರೆಯಬಲ್ಲೆ, ಈ ದೇಹವನ್ನೂ ಕೂಡ. ಆದರೆ ಆ ದಕ್ಷಿಣೇಶ್ವರದ ಹುಚ್ಚು ಬ್ರಾಹ್ಮಣನನ್ನು ಮರೆಯಲಾಗದು. ಅವನು ನನಗೆ ಅಡ್ಡಿಯಾಗಿದ್ದಾನೆ. ಅವನನ್ನು ಮರೆಯದಿದ್ದರೆ ನಾಮರೂಪಾತೀತವಾದ ಬ್ರಹ್ಮಜ್ಞಾನವು ನನಗೆ ಲಭಿಸಲಾರದು." ಗಿರೀಶ ಆ ಮಾತನ್ನು ಕೇಳಿ ಮೂಕವಿಸ್ಮಿತನಾದನು.

*ಸ್ವಾಮಿ ಚೇತನಾನಂದರ 'Various Facts of Swami Vivekananda' ಲೇಖನ, 'Samvit' ಪತ್ರಿಕೆ* ಅನು: ಮಾತಾ ತ್ಯಾಗಮಯೀ